**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**Crl.Misc No.**650/2022
**PW** : 1

**ದಿನಾಂಕಃ** 22-02-2025 **ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ದೀಪ್ತಿ @ ನಮ್ರತಾ** |
| ಗಂಡನ **ಹೆಸರುಃ** | **ಕರುಣಾಕರ** |
| **ವಯಸ್ಸುಃ** | 33 **ವರ್ಷ** |
| **ಉದ್ಯೋಗಃ** | **ಗೃಹಿಣಿ** |
| **ವಾಸ ಸ್ಥಳಃ** | **ನಾಟನಹಳ್ಳಿ** |

**<u>ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ ಡಿ.ವಿ.ಎಮ್ ವಕೀಲರಿಂದಃ</u>**

1. ಎದುರುದಾರ ನನ್ನ ಗಂಡನಾಗಿರುತ್ತಾನೆ. ದಿ.12.05.2018 ರಂದು ಸಾಲಿಗ್ರಾಮ ಗ್ರಾಮದ ಬಾಹುಬಲಿ ಭವನದಲ್ಲಿ ನನ್ನ ಮತ್ತು ಎದುರುದಾರನ ಮದುವೆ ಎರಡು ಕುಟುಂಬಗಳ ಉಪಸ್ಥಿತಿಯಲ್ಲಿ ಹಿಂದು ಸಂಪ್ರದಾಯದಂತೆ ಆಗಿರುತ್ತದೆ.

2. ಮದುವೆಯಾದ 3 ತಿಂಗಳುಗಳ ಕಾಲ ನನ್ನ ಮತ್ತು ಎದುರುದಾರನ ಸಂಬಂಧ ಅನ್ಯೋನ್ಯವಾಗಿತ್ತು. ನಂತರದಲ್ಲಿ ಎದುರುದಾರನು ನನ್ನೊಂದಿಗೆ ಜಗಳ ಮಾಡಲು ಆರಂಭಿಸಿರುತ್ತಾರೆ. ನೀನು ಬರುವಾಗ ಕಾಲು ಕೆಜಿ ಚಿನ್ನ ಮತ್ತು 5 ಲಕ್ಷ ಹಣ ತಂದಿದ್ದೀಯಾ ಎಂದು ನನ್ನೊಂದಿಗೆ ಎದುರುದಾರ ಜಗಳ ಮಾಡುತ್ತಿದ್ದರು. ಎದುರುದಾರರು ನನ್ನ ಕೈಯನ್ನು

ಸಹ ಕಚ್ಚಿ ನೋವುಂಟು ಮಾಡಿರುತ್ತಾರೆ. ನಂತರದಲ್ಲಿ ನಾನು ನನ್ನ ತವರು ಮನೆಗೆ ವಾಪಸ್ಸು ಬಂದಿರುತ್ತೇನೆ.

3. ನಮ್ಮ ವಿವಾಹದ ಕಾಲಕ್ಕೆ ನನ್ನ ತವರು ಮನೆಯವರು 50 ಸಾವಿರ ರೂಪಾಯಿ ಹಣ, 100 ಗ್ರಾಂ ಚಿನ್ನ ಮತ್ತು ಗೃಹಪಯೋಗಿ ವಸ್ತುಗಳನ್ನು ಎದುರುದಾರನಿಗೆ ವರದಕ್ಷಿಣೆಯಾಗಿ ಕೊಟ್ಟಿರುತ್ತಾರೆ. ಹಿರಿಯರು ಮತ್ತು ಗ್ರಾಮಸ್ಥರು ಸೇರಿ ಪಂಚಾಯಿತಿ ಮಾಡಿ ಎದುರುದಾರನಿಗೆ ಬುದ್ದಿವಾದ ಹೇಳಿದರು ಅವರು ಸರಿ ಹೋಗದ ಕಾರಣ ನನ್ನ ತಂದೆ ಮತ್ತು ತಾಯಿ ನನ್ನನ್ನು ತವರು ಮನೆಗೆ ವಾಪಸ್ಸು ಕರೆದುಕೊಂಡು ಬಂದಿರುತ್ತಾರೆ.

4. ನಾನು ತವರು ಮನೆಗೆ ಬಂದ ಒಂದು ತಿಂಗಳ ನಂತರ ಎದುರುದಾರ ನನ್ನ ತಾಯಿ ಮನೆಯಲ್ಲಿ ಬಂದು ಸುಮಾರು 1 ವರ್ಷದ ಕಾಲ ನನ್ನೊಂದಿಗೆ ನನ್ನ ತವರು ಮನೆಯಲ್ಲಿ ಇದ್ದರು. ಅದಾದನಂತರ ನಾನು ಮತ್ತು ಎದುರುದಾರ ಬೆಂಗಳೂರಿನ ನೆಲಮಂಗಲದಲ್ಲಿ ಬಾಡಿಗೆ ಮನೆಯಲ್ಲಿ ಜೊತೆಯಾಗಿ ವಾಸಿಸುತ್ತಿದ್ದೇವು. ಎದುರುದಾರನು ದಾಬಾಸ ಪೇಟೆಗೆಯ ಎಲ್.ಎಮ್.ವಿಂಡಪವರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು 1 ವರ್ಷಗಳ ಕಾಲ ನಾನು ಮತ್ತು ಎದುರುದಾರ ಬೆಂಗಳೂರಿನಲ್ಲಿ ಜೊತೆಯಾಗಿ ಇದ್ದೇವು. ಆ ಸಮಯದಲ್ಲಿಯೂ ಸಹ ಎದುರುದಾರ ನನಗೆ ಹೊಡೆಯುವುದು ಮತ್ತು ಬೈಯುವುದು ಮಾಡುತ್ತಿದ್ದರು.

5. ನಂತರದಲ್ಲಿ ಸಾಲಿಗ್ರಾಮದಲ್ಲಿರುವ ಲಕ್ಷ್ಮೀಪುರದಲ್ಲಿರುವ ತಮ್ಮ ಗೃಹಪ್ರವೇಶಕ್ಕೆ ಎಂದು ಎದುರುದಾರ ನನ್ನನ್ನು ಕರೆದುಕೊಂಡು ಬಂದಿದ್ದರು. ಅಲ್ಲಿ ಸುಮಾರು 20 ದಿನಗಳ ಕಾಲ ನಾವು ಇದ್ದೇವು. ಆ ಸಮಯದಲ್ಲಿ ಎದುರುದಾರ, ಆತನ ತಂದೆ ತಾಯಿ ಮತ್ತು ಸಹೋದರಿಯರು ಎಲ್ಲ ಸೇರಿ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಿರುತ್ತಾರೆ. ಒಂದು ದಿನ ಎದುರುದಾರರು ಮತ್ತು ಅವರ ಕುಟುಂಬಸ್ಥರು ನನ್ನೊಂದಿಗೆ ಜಗಳ ಮಾಡಿ ನಂತರ ಎದುರುದಾರ ನನ್ನನ್ನು ತವರು ಮನೆಗೆ ವಾಪಸ್ಸು ಕರೆದುಕೊಂಡು ಬಂದಿರುತ್ತಾರೆ. ಕೆಲವು ಸಮಯ ಕಳೆದನಂತರದಲ್ಲಿ ಎದುರುದಾರ ನನ್ನ ತವರು ಮನೆಗೆ ಬಂದು ನಾನು ಅವರ ಜೊತೆಯಲ್ಲಿ ಹೋಗಬೇಕು ಎಂದು ಹೇಳಿರುತ್ತಾರೆ. ಆದರೆ ಎದುರುದಾರರು ನನಗೆ ಹಿಂಸೆ ಕೊಡುತ್ತಾನೆ ಎನ್ನುವ ಕಾರಣದಿಂದ ನನ್ನ ತವರು ಮನೆಯವರು ಎದುರುದಾರನೊಂದಿಗೆ ನನ್ನನ್ನು ಕಳುಹಿಸಲು ನೀರಾಕರಿಸಿರುತ್ತಾರೆ. ಆಗ ಎದುರುದಾರನು ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ದ ದೂರನ್ನು ದಾಖಲಿಸಿರುತ್ತಾನೆ.

6. ಲಾಕಡಾನ್ ಆದನಂತರದಲ್ಲಿ ಎದುರುದಾರ ನನ್ನನ್ನು ತನ್ನ ಜೊತೆ ಬರುವಂತೆ ಕರೆದಿದ್ದು, ಅದಾದನಂತರದಲ್ಲಿ ನಾನು ನನ್ನ ತಾಯಿಯೊಂದಿಗೆ ಎದುರುದಾರನಿರುವ ನೆಲಮಂಗಲದ ಮನೆಗೆ ಹೋಗಿರುತ್ತೇನೆ. ನಾನು ಬೆಂಗಳೂರಿಗೆ ಹೋದಾಗ ನಮ್ಮ ನೆಲಮಂಗಲದ ಮನೆಯಲ್ಲಿ ನನ್ನ ನಾದನಿಯಾದ ಶಾಂತಮ್ಮ ಮತ್ತು ಅವರ ಗಂಡ ಮತ್ತು ಮಕ್ಕಳು ನಮ್ಮ ನೆಲಮಂಗಲದ ಮನೆಯಲ್ಲಿ ಇದ್ದರು. ನಾನು ಅಲ್ಲಿಗೆ ಹೋದಾಗ ಇದು ನನ್ನ ಮನೆ ನೀನ್ಯಾಕೆ ಬಂದಿದ್ದೀಯಾ ಎಂದು ಶಾಂತಮ್ಮರವರು ನನ್ನೊಂದಿಗೆ ಜಗಳ ತೆಗೆದು ನನಗೆ ಹೊಡೆದಿರುತ್ತಾರೆ. ನನ್ನನ್ನು ಮತ್ತು ನನ್ನ ತಾಯಿಯನ್ನು ಮನೆಯ ಒಳಗೆ ಕೂಡಿ ಹಾಕಿ ಶಾಂತಮ್ಮ ರವರು ನೆಲಮಂಗಲದ ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇರೆಗೆ ಪೋಲಿಸರು ನಮ್ಮ ವಿರುದ್ದ ಪ್ರಕರಣವನ್ನು ದಾಖಲಿಸಿದ್ದು, ನಾನು ನೆಲಮಂಗಲದ ನ್ಯಾಯಾಲಯಕ್ಕೆ ಹೋಗುವುದು ಮತ್ತು ಬರುವುದು ಮಾಡುತ್ತಿದ್ದೇನೆ. ಅಷ್ಟೇ ಅಲ್ಲದೇ ಇತ್ತಿಚೇಗೂ ಸಹ ಎದುರುದಾರ ನಮ್ಮ ವಿರುದ್ದ ಸುಳ್ಳು ಪ್ರಕರಣಗಳನ್ನು ಹೂಡುತ್ತಾ ಬಂದಿರುತ್ತಾರೆ.

ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ 1 ಮತ್ತು 1(ಎ)ಎಂದು, ಪೊಟೋವನ್ನು ನಿಪಿ.2 ಎಂದು ಗುರುತಿಸಲಾಯಿತು.

**ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**